ನ್ಯಾಯಸಮ್ಮತವಾದದ್ದು. ಜೊತೆಗೆ, ಅದನ್ನು ಬರೆದ ಕವಿಯನ್ನು ಗೌರವಿಸಬೇಕು. ಅವನು ಕವಿಯೇ ಹೊರತು ವ್ಯಕ್ತಿಯಲ್ಲ. ಕವಿ ಎನ್ನುವವನು ತನ್ನ ಕವನಗಳ ಸೇವಕ.

◆ ಎಷ್ಟು ಬಾರಿ ತಿದ್ದಿಬರೆಯುವಿರಿ?

ನಾನು ಎಡಬಿಡದೆ ಪರಿಷ್ಕರಿಸುತ್ತೇನೆ. ಕೆಲವು ವಿಮರ್ಶಕರು ಇದು ತೀರ ಅತಿಯಾಯಿತು ಎನ್ನುತ್ತಾರೆ. ಅವರು ಹೇಳುವುದು ಸರಿಯಿರಬಹುದು. ಪರಿಷ್ಕರಿಸುವುದು ಅಪಾಯ ಎನ್ನುವುದಾದರೆ ಪರಿಷ್ಕರಿಸದೆ ಬಿಡುವುದು ಇನ್ನೂ ದೊಡ್ಡ ಅಪಾಯ. ಸ್ಫೂರ್ತಿಯನ್ನು ನಂಬುತ್ತೇನೆ. ಅದರೊಂದಿಗೆ ಸ್ಫೂರ್ತಿಯನ್ನು ತಡೆಯಬೇಕು, ಅದನ್ನು ವಿರೋಧಿಸಬೇಕು ಎಂಬುದನ್ನು ಕೂಡ ನಂಬುತ್ತೇನೆ.

◆ ಪ್ರಬಂಧಗಳು ಮತ್ತು ಕಾವ್ಯದ ನಡುವೆ ನಿಮ್ಮನ್ನು ಯಾವುದರೊಂದಿಗೆ ಗುರುತಿಸಿಕೊಳ್ಳುವಿರಿ?

ಬರೆಯಲು ಶುರುಮಾಡಿದರೆ ನನಗೆ ಬಹಳ ಇಷ್ಟವಾದದ್ದನ್ನೇ ಬರೆಯುವುದು. ನಾನು ಸೃಷ್ಟಿಸಲು ಬಹಳ ಇಷ್ಟಪಡುವುದು ಕಾವ್ಯ. ಪ್ರಬಂಧಕಾರ ಎನ್ನುವುದಕ್ಕಿಂತ ಯಾವುದಾದರೂ ಸಂಕಲನದಲ್ಲಿ ಒಂದೋ ಎರಡೋ ಸಣ್ಣ ಕವನಗಳ ಮೂಲಕ ನನ್ನನ್ನು ನೆನಪಿಸಿಕೊಳ್ಳುವುದನ್ನು ಇಷ್ಟಪಡುತ್ತೇನೆ. ನಾನು, ಆಧುನಿಕ ಹಾಗೂ ಕಾರಣ ಮತ್ತು ವಿವರಣೆಯನ್ನು ನಂಬುವ ಶತಮಾನದಲ್ಲಿದ್ದೇನೆ. ಒಂದಲ್ಲ ಒಂದು ಬಗೆಯಲ್ಲಿ ಕಾವ್ಯ ಸಮರ್ಥನೆಯನ್ನು ಬರೆದ ಕವಿಗಳ ಸಂಪ್ರದಾಯಕ್ಕೆ ಸೇರಿದವನು. ನವೋದಯದಲ್ಲಿ, ರೋಮ್ಯಾಂಟಿಕ್ ಘಟ್ಟದಲ್ಲಿ ಷೆಲ್ಲಿ, ವರ್ಡ್ಸ್‌ವರ್ತ್ 'Lyrical Ballads'ನ ಮುನ್ನುಡಿಯಲ್ಲಿ ಹೇಳಿರುವುದನ್ನು ನೆನಪಿಸಿಕೊಳ್ಳಿ. ನಾನೀಗ ವೃತ್ತಿಜೀವನದ ಕೊನೆಯ ಹಂತದಲ್ಲಿದ್ದೇನೆ. ಕಾವ್ಯರಚನೆ ಮಾಡಬೇಕು ಮತ್ತು ಕಾವ್ಯಸಮರ್ಥನೆಯನ್ನು ಬರೆಯಬೇಕು ಎಂದುಕೊಳ್ಳುತ್ತೇನೆ.

◆ ನಿಮ್ಮ ಮಾತನ್ನು ವಿವರಿಸುವಿರಾ?

ಇತ್ತೀಚೆಗಷ್ಟೇ 'The Other Voice' ಎನ್ನುವ ಪುಸ್ತಕ ಬರೆದೆ. ಅದು ಇಪ್ಪತ್ತನೆಯ ಶತಮಾನದಲ್ಲಿನ ಕಾವ್ಯದ ಸ್ಥಿತಿಯನ್ನು ಕುರಿತಾದ ಪುಸ್ತಕ. ನಾನು ಯುವಕನಾಗಿದ್ದಾಗ ನನ್ನ ರೋಲ್‌ಮಾಡಲ್‌ಗಳು ಕವಿಗಳಾಗಿದ್ದರೆ ಹೊರತು ಕಾದಂಬರಿಕಾರರಲ್ಲ. ಪ್ರೌಸ್ಟ್, ಲಾರೆನ್ಸ್‌ರಂತಹ ಕಾದಂಬರಿಕಾರರನ್ನು ಇಷ್ಟಪಡುತ್ತಿದ್ದೆ. ಎಲಿಯೆಟ್‌ನನ್ನು ಆರಾಧಿಸುತ್ತಿದ್ದೆ. ಆದರೆ, ಇಂದು ಕಾವ್ಯ ಎನ್ನುವುದೊಂದು ರಹಸ್ಯಪಂಥವಾಗಿದ್ದು ಸಮಾಜದ ಅಂಚಿನಲ್ಲಿ ಅದಕ್ಕೆ ಗೋರಿ ಕಟ್ಟಲಾಗುತ್ತಿದೆ. ಗ್ರಾಹಕ ಸಮಾಜ ಮತ್ತು ಕಮರ್ಷಿಯಲ್ ಪ್ರಕಾಶಕರು ಕಾವ್ಯದ ಕುರಿತು ಗಮನಹರಿಸುವುದು ಕಡಿಮೆ. ಇದೊಂದು ಸಮಾಜದ ರೋಗ ಎಂದೆನ್ನಿಸುತ್ತದೆ. ಒಳ್ಳೆಯ ಕಾವ್ಯವಿಲ್ಲದೆ ಒಳ್ಳೆಯ ಸಮಾಜ ಇರಲು ಸಾಧ್ಯ ಎಂದು ನನಗನ್ನಿಸುವುದಿಲ್ಲ.

◆ ಟೆಲಿವಿಷನ್ ಇಪ್ಪತ್ತನೆಯ ಶತಮಾನದ ಬದುಕನ್ನು ನಾಶಮಾಡಿದೆ ಎಂದು ಟೀಕಿಸಲಾಗುತ್ತದೆ. ಆದರೆ, ಟೆಲಿವಿಷನ್ ಕಾವ್ಯದ ಮೌಖಿಕ ಸಂಪ್ರದಾಯಕ್ಕೆ ಒಳಿತು ಎನ್ನುವ ನಿಮ್ಮ ಅಭಿಪ್ರಾಯ ವಿಶಿಷ್ಟವಾದದ್ದು.

ಕಾವ್ಯವು ಬರವಣಿಗೆಯ ಕಾಲಕ್ಕಿಂತ ಮುಂಚಿನಿಂದಲೂ ಇತ್ತು. ಮುಖ್ಯವಾಗಿ ಅದೊಂದು ಮೌಖಿಕ ಕಲೆ. ಅದು ಕೇವಲ ನಮ್ಮ ಕಣ್ಣು ಮತ್ತು ಅರ್ಥೈಸುವಿಕೆಯಿಂದ ಮಾತ್ರವಲ್ಲ ಕಿವಿಯ ಮೂಲಕ ನಮ್ಮನ್ನು ಪ್ರವೇಶಿಸುತ್ತದೆ. ಟೆಲಿವಿಷನ್‌ನಲ್ಲಿ ಕಾವ್ಯದ ಮೌಖಿಕ ಅಂಶವನ್ನು ದೃಶ್ಯ ಹಾಗೂ ಚಲನೆಯೊಂದಿಗೆ ಪ್ರಸ್ತುತಪಡಿಸಬಹುದು. ಇದು ಪುಸ್ತಕದಲ್ಲಿ ಸಾಧ್ಯವಿಲ್ಲ. ಇದನ್ನು ವಿವರಿಸುವುದಾದರೆ: ಇದು ಇನ್ನೂ